## ವಾರ್ಡ್ ಸಭೆ ಸಂಖ್ಯೆ.17

ದಿನಾಂಕ: 04.09.2021 ರಂದು ಸಮಯ 3:00 ಗಂಟೆಗೆ ವಾರ್ಡ್.ಸಂಖ್ಯೆ. 44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು**

1. ಶ್ರೀಮತಿ ಕೆ ಸ್ವಯಂಪ್ರಭಾ, ಅಧೀಕ್ಷಕ ಅಭಿಯಂತರರು (ಪಶ್ಚಿಮ) ವಲಯ (ಅಧ್ಯಕ್ಷರು)
2. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
3. ಶ್ರೀಮತಿ ಪ್ರೇಮ ಸದಸ್ಯರು.
4. ಕುಮಾರಿ ಕಮಲ ಸದಸ್ಯರು.
5. ಶ್ರೀ ರಾಜೇಶ್ ಸದಸ್ಯರು.
6. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
7. ಶ್ರೀ ನಾಗೇಂದ್ರ ಸದಸ್ಯರು.
8. ಶ್ರೀ ಗೋಪಿ ಸದಸ್ಯರು.
9. ಶ್ರೀ ವೆಂಕಟೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
10. ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
11. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ವಿಠಲ್ ಮೀಟರ್ ರೀಡರ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
14. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ನಿಂಗರಾಜು ಎನ್ ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
16. ನಂದಿನಿ ಲೇಔಟ್ ಪೋಲೀಸ್ ಠಾಣಾಧಿಕಾರಿಗಳು.
17. ಶ್ರೀ ದರ್ಶನ್ ಎಂಬಿ ಗಣಕಯಂತ್ರ ನಿರ್ವಾಹಕರು, ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು.

| ಕ್ರ..ಸಂ | ವಿವರಣೆ | ಕ್ರಮ |
|---|---|---|
| 1. | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | - |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | - |
| 3. | ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ಸಾರ್ವಜನಿಕರು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಂಬಂದಪಟ್ಟವರು ಮಾಹಿತಿ ತಿಳಿಸಿದರು. | - |
| 4. | ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ಸಿಸಿ ಕ್ಯಾಮರಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ದುರಸ್ಥಿ ಕಾರ್ಯ ಪ್ರಗತಿಯಲ್ಲಿದೆಮುಂದಿನ ಸಭೆಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು. | ವಾರ್ಡ್ ಅಭಿಯಂತರರು ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ |
| 5. | ಸಾರ್ವಜನಿಕರು ವಾರ್ಡ್ ವ್ಯಾಪ್ತಿಯ ಹಲವು ಸ್ಥಳಗಳಲ್ಲಿ ಐಮ್ಯಾಕ್ಸ್ ಬೀದಿ ದೀಪಗಳು ಕಾರ್ಯ ನಿರ್ವಹಿಸುತ್ತಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟವರಿಗೆ ಸೂಚಿಸಿದರು ಇದಕ್ಕೆ 1 ವಾರ ಕಾಲಾವಕಾಶ ಕೋರಿದರು. | ಸಹಾಯಕ ಅಭಿಯಂತರರು ಬೀದಿ ದೀಪ |
| 6. | ಸಾರ್ವಜನಿಕರು ಇಂದಿರಾ ಪ್ರಿಯದರ್ಶಿನಿ ಪಾರ್ಕನಲ್ಲಿ ನಿರ್ವಹಣೆ ಕಾರ್ಯ ನಡೆಯುತ್ತಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟವರಿಗೆ ನಿರ್ವಹಣೆ ಕಾರ್ಯವನ್ನು ಪ್ರತಿನಿತ್ಯ ನಿರ್ವಹಿಸಲು ಸೂಚಿಸಿದರು ಹಾಗೂ ಪಾರ್ಕನಲ್ಲಿರು ವಿದ್ಯುತ್ ದೀಪಗಳಿಗೆ ಟೈಮರ್ ಅಳವಡಿಸಲು ಟೆಂಡರ್ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು. | ಸಹಾಯಕ ಅಭಿಯಂತರರು ಬೀದಿ ದೀಪ |
| 7. | ಸಾರ್ವಜನಿಕರು 4ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ವಿಜಯಾನಂದನಗರದಲ್ಲಿ ಸ್ಯಾನಿಟರಿ ಮಾರ್ಗ ಹಾಳಗಿರುತ್ತದೆ ಎಂದು ತಿಳಿಸುತ್ತಾರೆ. ಇದಕ್ಕೆ ಮಾನ್ಯ ಅಧ್ಯಕ್ಷರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ಯೋಜನೆಯವರಿಗೆ ತಿಳಿಸಲಾಗುವುದು. |
| 8. | ಗೌತಮನಗರ 2ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಸ್ಯಾನಿಟರಿ ಮಾರ್ಗ ಹಾಳಗಿರುತ್ತದೆ ಎಂದು ತಿಳಿಸುತ್ತಾರೆ. ಇದಕ್ಕೆ ಮಾನ್ಯ ಅಧ್ಯಕ್ಷರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |

Scanned with CamScanner

| | | |
|---|---|---|
| 9. | ಸದಸ್ಯರು ಬೀದಿ ದೀಪಗಳಿಗೆ ಟೈಮರ್ ಅಳವಡಿಸಿರುವುದಿಲ್ಲ ಎಂದು ಸೂಚಿಸಿದರು ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟವರಿಗೆ ಟೈಮರ್ ಅಳವಡಿಸಲು ಸೂಚಿಸಿದರು. | ಸಹಾಯಕ ಅಭಿಯಂತರರು ಬೀದಿ ದೀಪ |
| 10. | ಸಾರ್ವಜನಿಕರು ಮುನೇಶ್ವರ ದೇವಸ್ಥಾನದ ಹತ್ತಿರ ಗಾಂಜ ಸೇವನೆ ಮಾಡುವವರು ಹೆಚ್ಚಾಗಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಪೋಲೀಸ್ ಇಲಾಖೆರವರು ಮೇಲಾಧಿಕಾರಿಗಳಿಗೆ ತಿಳಿಸಲಾಗುವುದು ಎಂದು ಸಭೆಗೆ ತಿಳಿಸಿದರು. | ನಂದಿನಿ ಬಡಾವಣೆ ಪೋಲೀಶ್ ಠಾಣೆ |
| 11. | ಸದಸ್ಯರು ಓಎಫ್‌ಸಿ ಕೇಬಲ್ ಕಟಾವು ಮಾಡುವುದರ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ಕಟಾವು ಮಾಡಲಾಗಿರುತ್ತದೆ. ನಂತರ ಪುನಃ ಕೇಬಲ್ ಅಳವಡಿಸಿರುತ್ತಾರೆ ಎಂದು ತಿಳಿಸಿದರು. | ಬೆಸ್ಕಾಂ ಅಧಿಕಾರಿಗಳು |
| 12. | ಸದಸ್ಯರು ಬೋರ್‌ವೆಲ್ ಸ್ಟಾರ್ಟರ್ಸ್‌ಗಳ ಬಾಕ್ಸ್‌ಗಳನ್ನು ಸರಿಪಡಿಸಲು ಸೂಚಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂಧಪಟ್ಟವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 13. | ಸಾರ್ವಜನಿಕರು ಶಂಕರನಗರ ಮುಖ್ಯರಸ್ತೆ, ಸುಬಾಸ್ ಚಂದ್ರ ಬೋಸ್ ಸ್ಟ್ಯಾಚ್ಯು ಹತ್ತಿರ ರಸ್ತೆಯಲ್ಲಿ ಕೆಲವರು ತರಕಾರಿ ಮಾರುತ್ತಿರುತ್ತಾರೆ. ಇದರಿಂದ ಅಫಘಾತ ಸಂಭವಿಸುವ ಸಾದ್ಯತೆ ಹೆಚ್ಚಿರುತ್ತವೆ ಹಾಗೂ ಈ ಹಿಂದು ಅಪಘಾತಗಳು ನಡೆದಿರುತ್ತವೆ ಆದ್ದರಿಂದ ಈ ಕೂಡಲೇ ಸದರಿರವರನ್ನು ಆ ಸ್ಥಳದಿಂದ ತೆರವು ಮಾಡಿಸಬೇಕು ಎಂದು ಸಭೆಯಲ್ಲಿ ಅಭಿಪ್ರಾಯಿಸಿದರು. | ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆ |
| 14. | ಸದಸ್ಯರು ಇಂದಿರಾ ಪ್ರಿಯದರ್ಶಿನಿ ಪಾರ್ಕ ಹಾಗೂ ಶಂಕರನಗರ ಪಾರ್ಕಗಳಿಗೆ ಸೊಳ್ಳೆ ಔಷದಿ ಸಿಂಪಡಿಸಲು ಸೂಚಿಸಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಸಿಂಪಡಿಸಲಾಗುವುದು ಎಂದು ತಿಳಿಸಿದರು. | ಹಿರಿಯ ಆರೋಗ್ಯ ಪರಿವೀಕ್ಷಕರು |
| 15. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | |

ಅಧ್ಯಕ್ಷರು

K. Swayamprakash

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ. 44

ಮಾರಪ್ಪನಪಾಳ್ಯ

Scanned with CamScanner